ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	859
ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	09.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಸರ್ಕಾರದಿಂದ ಬಡವರಿಗೆ ವಿತರಿಸಲಾಗಿರುವ ಉಜ್ವಲ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳೇನು;	ಪ್ರಧಾನಮಂತ್ರಿ ಉಜ್ವಲ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ಸದರಿ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಕೇಂದ್ರ ಸರ್ಕಾರವು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುತ್ತಿದೆ: 1. 2011 ರ Socio Economic Caste Survey (SECC) ಪಟ್ಟಿಯಲ್ಲಿರುವ ಫಲಾನುಭವಿಗಳು. 2. ಪಿಎಂಎವೈ (ಗ್ರಾಮೀಣ)ಯೋಜನೆಯಡಿ ಬರುವ ಎಲ್ಲಾ ಎಸ್‌ಟಿ/ಎಸ್‌ಸಿ ಕುಟುಂಬಗಳ ಫಲಾನುಭವಿಗಳು. 3. ಅಂತ್ಯೋದಯ ಅನ್ನ ಯೋಜನೆ (ಎಎವೈ) ಕುಟುಂಬಗಳು 4. ಅರಣ್ಯವಾಸಿಗಳು. 5. ತೀವ್ರ ಹಿಂದುಳಿದ ವರ್ಗದವರು. 6. ಚಹ ತೋಟಾಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಮಾಡುತ್ತಿದ್ದ ಬುಡಕಟ್ಟು ಜನಾಂಗದವರು 7. ನದಿ ದಡಗಳಲ್ಲಿ ಮತ್ತು ದ್ವೀಪಗಳ ನಿವಾಸಿಗಳು. ಈ ಯೋಜನೆಯ ಲಾಭಾಂಶಗಳನ್ನು ಈಶಾನ್ಯ (ಎನ್‌ಇ) ರಾಜ್ಯಗಳು ಸೇರಿದಂತೆ ಗುಡ್ಡಗಾಡು ರಾಜ್ಯಗಳಲ್ಲಿ ವಾಸಿಸುವ ಜನರಿಗೆ "ಆದ್ಯತೆಯ ರಾಜ್ಯಗಳು" ಎಂದು ಪರಿಗಣಿಸುವ ಮೂಲಕ ವಿಸ್ತರಿಸಲಾಗಿದೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಅರ್ಹತಾ ಮಾನದಂಡಗಳು: 1. ಅರ್ಜಿದಾರರು 18 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯಾಗಿರಬೇಕು.

		2. ಅರ್ಜಿದಾರರು ಬಿ.ಪಿ.ಎಲ್ ಕಾರ್ಡು ಹೊಂದಿರಬೇಕು ಮತ್ತು ಗ್ರಾಮೀಣ ನಿವಾಸಿಯಾಗಿರಬೇಕು. 3. ಸಹಾಯಧನ ಮೊತ್ತವನ್ನು ಪಡೆಯಲು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರಬೇಕು. 4. ಅರ್ಜಿದಾರರ ಮನೆಯವರು ಈಗಾಗಲೇ ಯಾವುದೇ ಅನಿಲ ಸಂಪರ್ಕವನ್ನು ಹೊಂದಿರಬಾರದು.
ಆ	ಈ ಯೋಜನೆಗೆ ಒಳಪಟ್ಟ ಫಲಾನುಭವಿಗಳ ಸಂಖ್ಯೆ ಎಷ್ಟು; ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಇರುವ ಉಜ್ವಲ ಫಲಾನುಭವಿಗಳ ಸಂಖ್ಯೆ ಎಷ್ಟು;	ಕೇಂದ್ರ ಸರ್ಕಾರದ ತೈಲ ನಿಗಮಗಳಿಂದ ಕರ್ನಾಟಕ ರಾಜ್ಯದಲ್ಲಿ 31.5 ಲಕ್ಷ ಫಲಾನುಭವಿಗಳಿಗೆ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿರುವ ಉಜ್ವಲ ಯೋಜನೆಯ ಫಲಾನುಭವಿಗಳ ಸಂಖ್ಯೆ 252581.
ಇ	ಉಜ್ವಲ ಯೋಜನೆಯಿಂದ ಸರ್ಕಾರಕ್ಕೆ ಆಗಿರುವ ವಾರ್ಷಿಕ ಹೊರೆ ಎಷ್ಟು?	ಸದರಿ ಯೋಜನೆಯ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಉಜ್ವಲ ಯೋಜನೆಯಡಿ ಕೇಂದ್ರ ಸರ್ಕಾರವು ಒಬ್ಬ ಫಲಾನುಭವಿಗೆ ಅನಿಲ ಸಂಪರ್ಕವನ್ನೊದಗಿಸಲು 1600/-ಗಳನ್ನು ವೆಚ್ಚ ಮಾಡುತ್ತದೆ. ಸದರಿ ಯೋಜನೆಯ ಪ್ರಾರಂಭವಾದಾಗಿನಿಂದ ಅರ್ಹ ಉಜ್ವಲ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದಿಂದ ವರ್ಗಾಯಿಸಲಾದ ಒಟ್ಟು ಸಬ್ಸಿಡಿ ಮೊತ್ತ ರೂ.227.56 ಕೋಟಿಗಳಾಗಿದೆ.

ಆನಾಸ 81 ಡಿಆರ್ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು